ಕರ್ನಾಟಕ ಸರ್ಕಾರ
ವಾರ್ತಾ ಮತ್ತು ಸಾರ್ವಜನಿಕ ಸಂಪರ್ಕ ಇಲಾಖೆ,
ಹಿರಿಯ ಸಹಾಯಕ ನಿರ್ದೇಶಕರು, ವಾರ್ತಾ ಮತ್ತು ಸಾರ್ವಜನಿಕ ಸಂಪರ್ಕ ಇಲಾಖೆ, ಡಿ.ಸಿ.ಕಂಪೌಂಡ, ಧಾರವಾಡ
ದೂ: 0836-2447469 , ಫ್ಯಾಕ್ಸ್: 0836-2447469

ದಿನಾಂಕ 20-07-2017

# ಕನ್ನಡಿಗರ ಹೆಮ್ಮೆಯ ಕ.ವಿ.ವ.ಸಂಘಕ್ಕೆ 5 ಎಕರೆ ನಿವೇಶನ, ಬೆಳವಡಿ ಮಲ್ಲಮ್ಮ ಸ್ಮಾರಕ ಸ್ಥಾಪನೆಗೆ ಅನುದಾನ-ಮುಖ್ಯಮಂತ್ರಿ ಸಿದ್ದರಾಮಯ್ಯ



**ಧಾರವಾಡ ಜುಲೈ 20;** 128 ವರ್ಷಗಳ ಇತಿಹಾಸವಿರುವ ಕರ್ನಾಟಕ ವಿದ್ಯಾವರ್ಧಕ ಸಂಘಕ್ಕಾಗಿ ಧಾರವಾಡದಲ್ಲಿ ಇನ್ನೂ 5 ಎಕರೆ ಜಾಗೆ ಒದಗಿಸಲಾಗುವುದು, ಸಂಘದ ಸಿಬ್ಬಂದಿಗಳನ್ನು ಅನುದಾನಕ್ಕೊಳಪಡಿಸಲಾಗುವುದು ಹಾಗೂ ಉತ್ತರ ಕರ್ನಾಟಕದ ವೀರರಾಣಿ ಬೆಳವಡಿ ಮಲ್ಲಮ್ಮನವರ ಸ್ಮಾರಕ ನಿರ್ಮಾಣಕ್ಕೂ ಸರಕಾರದಿಂದ ಹಣ ನೀಡಲಾಗುವುದು. ಎಂದು ಮುಖ್ಯಮಂತ್ರಿ ಸಿದ್ದರಾಮಯ್ಯ ಹೇಳಿದರು.

ಧಾರವಾಡದಲ್ಲಿಂದು ಕರ್ನಾಟಕ ವಿದ್ಯಾವರ್ಧಕ ಸಂಘದ 128 ನೇ ಸಂಸ್ಥಾಪನಾ ದಿನಾಚರಣೆ, ಸಂಘದ ಪಾರಂಪರಿಕ ಕಟ್ಟಡ ಉದ್ಘಾಟನೆ, ನಾಡೋಜ ಡಾ. ಪಾಟೀಲ ಪುಟ್ಟಪ್ಪನವರ ಪುತ್ಥಳಿಯ ಅನಾವರಣ ಹಾಗೂ ಕ.ವಿ.ವ.ಸಂಘದ ಅಧ್ಯಕ್ಷರಾಗಿ 50ನ ವರ್ಷಗಳನ್ನು ಪೂರೈಸಿರುವ ನಾಡೋಜ ಪಾಪು ಅವರನ್ನು ಸನ್ಮಾನಿಸಿ ಅವರು ಮಾತನಾಡಿದರು.

ಹಳೆಯ ಮೈಸೂರು,ಹೈದ್ರಾಬಾದ್ ಕರ್ನಾಟಕ ಸೇರಿದಂತೆ ಕನ್ನಡದ ಎಲ್ಲ ಪ್ರದೇಶಗಳನ್ನು ಒಗ್ಗೂಡಿಸುವಲ್ಲಿ ಕರ್ನಾಟಕ ವಿದ್ಯಾವರ್ಧಕ ಸಂಘ ಮಾಡಿದ ಕಾರ್ಯ ಮಹತ್ವದಾಗಿದೆ. ನಮ್ಮ ದೇಶಕ್ಕೆ

ಸ್ವಾತಂತ್ರ್ಯ ಬರುವ ಪೂರ್ವದಲ್ಲಿ, ಕರ್ನಾಟಕ ಏಕೀಕರಣವಾಗುವುದಕ್ಕಿಂತ ಮುಂಚೆ ಮುಂಬೈ ಪ್ರಾಂತ್ಯಕ್ಕೆ ಸೇರಿದ್ದ ಈ ಭಾಗದಲ್ಲಿ ಮರಾಠಿ ಪ್ರಭಾವ ಅಧಿಕವಾಗಿತ್ತು. ಈ ನೆಲದ ಕನ್ನಡ ಭಾಷೆಗೆ ಪ್ರಾಶಸ್ತ್ಯ ದೊರಕಿಸಲು, ನಾಡಿನ ಸಾಹಿತ್ಯ,ಕಲೆ,ಏಕೀಕರಣದ ಚಳುವಳಿಗಾಗಿ ಕರ್ನಾಟಕ ವಿದ್ಯಾವರ್ಧಕ ಸಂಘ ಮಾಡಿದ ಕಾರ್ಯ ಶ್ಲಾಘನೀಯ.ಕನ್ನಡದ ಗಟ್ಟಿಧ್ವನಿಯಾಗಿರುವ ನಾಡೋಜ ಡಾ.ಪಾಟೀಲ ಪುಟ್ಟಪ್ಪ ಒಬ್ಬ ಕನ್ನಡದ ಕಟ್ಟಾಳುವಾಗಿದ್ದಾರೆ. 98 ರ ಪ್ರಾಯದಲ್ಲೂ ಇವರ ಕನ್ನಡದ ಕಾಳಜಿ ಜಾಗೃತವಾಗಿದೆ, ನಾಡಿನ ವಿಷಯಕ್ಕೆ ಬಂದರೆ ಇವರು ನೇರ ಮತ್ತು ನಿಷ್ಠುರತೆಯಿಂದ ವರ್ತಿಸುತ್ತಾರೆ, ಸಾಧಕರನ್ನು ಸಮಾಜ ಗುರುತಿಸುತ್ತದೆ ಅಂತಹ ಸಾಧಕರನ್ನು ಹುಟ್ಟುಹಾಕುವಲ್ಲಿ ಸಾಂಸ್ಕೃತಿಕ ಕೇಂದ್ರ, ವಿದ್ಯಾನಗರಿ ಧಾರವಾಡ ಮುಂಚೂಣಿಯಲ್ಲಿದೆ.ಪತ್ರಿಕೆ, ಸಾಹಿತ್ಯ ಕ್ಷೇತ್ರದಲ್ಲಿ ಪಾ.ಪು. ಸಾಕಷ್ಟು ಕೆಲಸ ಕಾರ್ಯಗಳನ್ನು ಮಾಡಿದ್ದಾರೆ ಜೊತೆಯಲ್ಲಿಯೇ ಚಳುವಳಿಗಳಲ್ಲಿ ಸಕ್ರಿಯವಾಗಿ ತೊಡಗಿಸಿಕೊಂಡ ಅವರು ಒಬ್ಬ ಜ್ಞಾನ ಭಂಡಾರಿ , ಪ್ರಪಂಚ, ವಿಶ್ವವಾಣಿ ಪತ್ರಿಕೆಗಳ ಮೂಲಕ ನಾಡಿಗೆ ಸಾಕಷ್ಟು ಪ್ರೇರಣೆ, ಮಾರ್ಗದರ್ಶನ ನೀಡಿದ್ದಾರೆ . ಪಾಪು ಇನ್ನೂ ನೂರು ಕಾಲ ಆರೋಗ್ಯದಿಂದ ಬದುಕಿ ಬಾಳಲಿ ಎಂದು ಹಾರೈಸಿದರು.

ಪ್ರತಿ ಜಿಲ್ಲೆಯಲ್ಲಿ 3 ಕೋಟಿ ರೂ.ಗಳಂತೆ ಒಟ್ಟು 90 ಕೋಟಿ ರೂ. ವೆಚ್ಚದಲ್ಲಿ ರಾಜ್ಯದ 30 ಜಿಲ್ಲೆಗಳಲ್ಲಿ ಗಾಂಧೀಭವನ ನಿರ್ಮಿಸಲು ಹಣ ಮಂಜೂರು ಮಾಡಲಾಗಿದೆ. ಬಸವಣ್ಣ, ಗಾಂಧೀಜಿ, ಅಂಬೇಡ್ಕರ್ ಮೂಲಕ ಸಮಾಜದಲ್ಲಿ ಸಾಮರಸ್ಯ, ಸಹಬಾಳ್ವೆ ಸುಗಮವಾಗಿದೆ ಅದಕ್ಕೆ ಯಾರಿಂದಲೂ ಧಕ್ಕೆ ಉಂಟಾಗುವುದಿಲ್ಲ. ಚರಿತ್ರೆ ಅರಿಯದವರು ಭವಿಷ್ಯ ನಿರ್ಮಿಸಲಾರರು, ಎಲ್ಲರೂ ಸಂವಿಧಾನಕ್ಕೆ ಅನುಗುಣವಾಗಿ ಕಾರ್ಯಗಳನ್ನು ಕೈಗೊಳ್ಳಬೇಕೆಂದು ಮುಖ್ಯಮಂತ್ರಿ ಸಿದ್ದರಾಮಯ್ಯ ತಿಳಿಸಿದರು.

ಕ.ವಿ.ವ.ಸಂಘದ ಅಧ್ಯಕ್ಷ, ನಾಡೋಜ ಡಾ.ಪಾಪು ಮಾತನಾಡಿ, ಮುಖ್ಯಮಂತ್ರಿಗಳು ಒಳ್ಳೆಯ ಸಲಹೆಗಳು ಯಾರಿಂದ ಬಂದರೂ ಸ್ವೀಕರಿಸುತ್ತಾರೆ. ಖಾದಿ,ಗ್ರಾಮೀಣ ಜನರ ಸಮಸ್ಯೆಗಳಿಗೆ ಸಕಾರಾತ್ಮಕ ಸ್ಪಂದನೆ ನೀಡಿದ್ದಾರೆ. ಐತಿಹಾಸಿಕ ಕ.ವಿ.ವ.ಸಂಘಕ್ಕೆ ಧಾರವಾಡದಲ್ಲಿ ಇನ್ನೂ 5 ಎಕರೆ ನಿವೇಶನ ಒದಗಿಸಬೇಕು.ಬೆಳವಡಿ ಮಲ್ಲಮ್ಮನ ಸ್ಮಾರಕ ನಿರ್ಮಿಸಬೇಕು ಎಂದರು.

ಸಮಾರಂಭದಲ್ಲಿ ಗಣಿ,ಭೂವಿಜ್ಞಾನ ಹಾಗೂ ಜಿಲ್ಲಾ ಉಸ್ತುವಾರಿ ಸಚಿವ ವಿನಯ ಕುಲಕರ್ಣಿ, ವಿಧಾನಪರಿಷತ್ ಸದಸ್ಯ ಬಸವರಾಜ ಹೊರಟ್ಟಿ ಮಾತನಾಡಿದರು.

ವಿಜಯಪುರದ ಸಿದ್ದೇಶ್ವರ ಶ್ರೀಗಳು, ಮುರಘಾಮಠದ ಮಲ್ಲಿಕಾರ್ಜುನ ಸ್ವಾಮೀಜಿ, ಬೈಲೂರಿನ ನಿಜಗುಣಾನಂದ ಶ್ರೀ, ಮನಗುಂಡಿಯ ಬಸವಾನಂದ ಶ್ರೀಗಳು ಸಾನಿಧ್ಯ ವಹಿಸಿದ್ದರು.

ಶಾಸಕರಾದ ಸಿ.ಎಸ್.ಶಿವಳ್ಳಿ, ಅರವಿಂದ ಬೆಲ್ಲದ, ಪ್ರಸಾದ ಅಬ್ಬಯ್ಯ, ಬಿ.ಆರ್.ಯಾ.ವಗಲ್, ಎನ್.ಎಚ್.ಕೋನರಡ್ಡಿ, ಕರ್ನಾಟಕ ಗಾಂಧಿ ಸ್ಮಾರಕ ನಿಧಿ ಅಧ್ಯಕ್ಷ ವೂಡೆ ಕೃಷ್ಣ ಸೇರಿದಂತೆ ಮತ್ತಿತರರು ವೇದಿಕೆಯಲ್ಲಿದ್ದರು.

ಕೃಷ್ಣ ಜೋಷಿ ಸ್ವಾಗತಿಸಿದರು,ಮೋಹನ ನಾಗಮ್ಮನವರ್ ಪ್ರಾಸ್ತಾವಿಕವಾಗಿ ಮಾತನಾಡಿದರು. ಶಂಕರ ಹಲಗತ್ತಿ ನಿರೂಪಿಸಿದರು.

**ಉಪನಗರ ಪೊಲೀಸ್ ಠಾಣೆ ಉದ್ಘಾಟನೆ;** ಇದಕ್ಕೂ ಮುನ್ನ ಕಿತ್ತೂರ ಚನ್ನಮ್ಮ ಪಾರ್ಕಿನ ಹತ್ತಿರ ನೂತನವಾಗಿ ನಿರ್ಮಾಣಗೊಂಡಿರುವ ಉಪನಗರ ಪೊಲೀಸ್ ಠಾಣೆಯನ್ನು ಮುಖ್ಯಮಂತ್ರಿ ಸಿದ್ದರಾಮಯ್ಯ ಉದ್ಘಾಟಿಸಿದರು.ಅರಣ್ಯ ಇಲಾಖೆ ಹಮ್ಮಿಕೊಂಡಿರುವ ನೂತನ ಸಸ್ಯಸಂತೆ ವಾಹನಗಳಿಗೆ ಅವರು ಇದೇ ಸಂದರ್ಭದಲ್ಲಿ ಚಾಲನೆ ನೀಡಿದರು.ವಾ.ಕ.ರ.ಸಾ.ಸಂ. ಹಮ್ಮಿಕೊಂಡಿರುವ ಬಸ್ ದಿನಾಚರಣೆ ಅಂಗವಾಗಿ ಮುಖ್ಯಂತ್ರಿಗಳು ಹುಬ್ಬಳ್ಳಿ ವಿಮಾನ ನಿಲ್ದಾಣದಿಂದ ಧಾರವಾಡದವರೆಗೆ ಬಸ್‌ನಲ್ಲಿಯೇ ಆಗಮಿಸಿದರು.

## ಒಕ್ಕೊರಲಿನ ಬೇಡಿಕೆ ಬಂದರೆ ಲಿಂಗಾಯತ ಧರ್ಮ ಸ್ವತಂತ್ರ ಧರ್ಮ ಎಂದು ಘೋಷಿಸಲು ಕೇಂದ್ರಕ್ಕೆ ಶಿಫಾರಸ್ಸು-ಮುಖ್ಯಮಂತ್ರಿ ಸಿದ್ದರಾಮಯ್ಯ



**ಧಾರವಾಡ ಜುಲೈ 20;** ಸಮುದಾಯದಿಂದ ಒಕ್ಕೊರಲಿನ ಬೇಡಿಕೆ ಬಂದರೆ ಲಿಂಗಾಯತ ಧರ್ಮಕ್ಕೆ ಸ್ವತಂತ್ರ ಸ್ಥಾನಮಾನ ನೀಡಲು ಕೇಂದ್ರಕ್ಕೆ ಶಿಫಾರಸ್ಸು ಮಾಡಲಾಗುವದು ಎಂದು ಮುಖ್ಯಮಂತ್ರಿ ಸಿದ್ದರಾಮಯ್ಯ ಹೇಳಿದರು.

ನಗರದ ಶ್ರೀ ಮುರಘಾಮಠದಲ್ಲಿ ರಾಜ್ಯ ಸರ್ಕಾರದ ಎಲ್ಲಾ ಕಛೇರಿಗಳಲ್ಲಿ ಬಸವಣ್ಣನವರ ಭಾವಚಿತ್ರ ಕಡ್ಡಾಯವಾಗಿ ಪ್ರದರ್ಶಿಸುವಂತೆ ಆದೇಶ ಹೊರಡಿಸಿರುವುದು ಹಾಗೂ ವಿಜಯಪುರ ಮಹಿಳಾ ವಿಶ್ವ ವಿದ್ಯಾಲಯಕ್ಕೆ ಅಕ್ಕಮಹಾದೇವಿ ಅವರ ಹೆಸರಿಟ್ಟಿರುವದನ್ನು ಗೌರವಿಸಿ ಏರ್ಪಡಿಸಲಾಗಿದ್ದ ಅಭಿನಂದನಾ ಸಮಾರಂಭದಲ್ಲಿ ಸನ್ಮಾನ ಸ್ವೀಕರಿಸಿ,ಹಿರಿಯ ಪತ್ರಕರ್ತ ಡಾ.ರಂಜಾನ್ ದರ್ಗಾ ರಚಿಸಿರುವ 'ಲಿಂಗವಂತ ಧರ್ಮದ ಸತ್ಯದರ್ಶನ'ಕೃತಿ ಬಿಡುಗಡೆಗೊಳಿಸಿ ಮಾತನಾಡಿದರು.

ವಿಜಯಪುರದ ಮಹಿಳಾ ವಿಶ್ವವಿದ್ಯಾಲಯಕ್ಕೆ ಮಹಾಶರಣೆ ಅಕ್ಕಮಹಾದೇವಿ ಅವರ ಹೆಸರು ಇಡಲು ನಮ್ಮ ಸರ್ಕಾರದ ಅನೇಕ ಸಚಿವರು ಸೂಚಿಸಿದ್ದರು. ಇದನ್ನು ಸಚಿವ ಸಂಪುಟದಲ್ಲಿ ತಂದು ಒಮ್ಮತದ ನಿರ್ಣಯ ಕೈಗೊಳ್ಳುವ ಮೂಲಕ ಸಮಸ್ತ ಕನ್ನಡಿಗರ ಏಕೈಕ ಮಹಿಳಾ ವಿಶ್ವವಿದ್ಯಾಲಯಕ್ಕೆ ಅಕ್ಕಮಹಾದೇವಿ ಅವರ ಹೆಸರು ಇಟ್ಟಿರುವುದು ನಮ್ಮ ಸರ್ಕಾರದ ಹೆಮ್ಮೆಯ ಕಾರ್ಯವಾಗಿದೆ ಎಂದರು.

ಧರ್ಮ ಎಂದರೆ ಜನರಿಗಾಗಿ ಇರುವುದು, ಅದು ಜೀವನ ಮಾರ್ಗ , ಮನುಷ್ಯತ್ವದಿಂದ ಕೂಡಿರುತ್ತದೆ. ಯಾವುದು ಮನುಷ್ಯರನ್ನು ವಿಭಜಿಸುತ್ತದೆಯೋ ಅದು ಧರ್ಮವೆನಿಸಿಕೊಳ್ಳಲು ಸಾಧ್ಯವಿಲ್ಲ. ಪಂಪ,ಬಸವಣ್ಣ,ಕುವೆಂಪು ಇದನ್ನೇ ಹೇಳಿದ್ದಾರೆ. ಯಾರೂ ಕೂಡಾ ಇದೇ ಜಾತಿಯಲ್ಲಿ ಹುಟ್ಟಬೇಕೆಂದು ಅರ್ಜಿ ಹಾಕಿ ಹುಟ್ಟುವುದಿಲ್ಲ ಎಂದರು.ಮಾನವೀಯ ಮೌಲ್ಯಗಳಿಗೆ ಅಂಟಿಕೊಂಡಿರಬೇಕೆ ಹೊರತು ಮೌಢ್ಯಗಳಿಗೆ ಜೋತು ಬೀಳುವುದು ಸರಿಯಲ್ಲ, ಸಮಾಜ ಚಲನಶೀಲವಾಗಿರಬೇಕು. ಚಲನೆ ಇರದಿದ್ದರೆ ಬದಲಾವಣೆ ಸಾಧ್ಯವಿಲ್ಲ.ಬದಲಾವಣೆಯೇ ಬದುಕಾಗಬೇಕು. ಇವನಾರವ ಇವನಾರವ ಎಂದೆನಿಸದಿರಯ್ಯ ಎಂದು ಎಂಟುನೂರು ವರ್ಷಗಳಿಂದ ವಚನವನ್ನು ಜಪಿಸುತ್ತಲೇ ಮರೆಯಲ್ಲಿ ವ್ಯಕ್ತಿಯ ಜಾತಿ ಪತ್ತೆ ಹಚ್ಚುತ್ತಿರುವುದು ಖೇದಕರ ಸಂಗತಿ.ಬಸವತತ್ವಗಳನ್ನು ಜಪಿಸಿದರೆ ಸಾಲದು ಜೀವನದಲ್ಲಿ ಅಳವಡಿಸಿಕೊಳ್ಳುವುದು ಬಹು ಮುಖ್ಯ ಎಂದರು. ನಾನು ಬಸವತತ್ವದ ಅನುಯಾಯಿಯಾಗಿದ್ದೇನೆ. ಜಾತಿ ವ್ಯವಸ್ಥೆಯಲ್ಲಿ ನನಗೆ ನಂಬಿಕೆ ಇಲ್ಲ, ಅವಕಾಶವಂಚಿತ ತಳಸಮುದಾಯದಗಳ ಏಳ್ಗೆಗೆ ಬದ್ಧನಾಗಿದ್ದೇನೆ. ಬಸವಣ್ಣನವರು ಇದೇ ಆಶಯದಿಂದ ಲಿಂಗಾಯತ ಧರ್ಮ,ಅನುಭವ ಮಂಟಪ ಸ್ಥಾಪಿಸಿದರು. ಶ್ರೇಣೀಕೃತ ಸಮಾಜ ವ್ಯವಸ್ಥೆ ಅಳಿಸಿಹಾಕಿ ಸಮಾನತೆ ತರಲು ಶ್ರಮಿಸಿದ ಕೀರ್ತಿ ಬಸವಣ್ಣನವರಿಗೆ ಸಲ್ಲುತ್ತದೆ. ಎಲ್ಲಾ ಸರ್ಕಾರಿ ಕಛೇರಿಗಳಲ್ಲಿ ಬಸವಣ್ಣನವರ ಫೋಟೋ ಕಡ್ಡಾಯ ಮಾಡಲು ಇದೇ ಪ್ರೇರಣೆಯಾಗಿದೆ ಎಂದರು.

ಗಣಿ,ಭೂವಿಜ್ಞಾನ ಹಾಗೂ ಜಿಲ್ಲಾ ಉಸ್ತುವಾರಿ ಸಚಿವ ವಿನಯ ಕುಲಕರ್ಣಿ ಮಾತನಾಡಿ, ಕಳೆದ ಒಂದು ನೂರು ವರ್ಷಗಳಹಿಂದೆಯೇ ದಾಸೋಹ ಪರಂಪರೆ ಆರಂಭಿಸಿದ ಧಾರವಾಡದ ಮುರುಘಾಮಠ

ಬರುವ ಜನವರಿಯಲ್ಲಿ ಅದರ ಶತಮಾನೋತ್ಸವ ಆಚರಿಸಲಿದೆ. ಬಸವಣ್ಣನವರ ತತ್ವಗಳಲ್ಲಿ ಅಪಾರ ನಂಬಿಕೆ ಇಟ್ಟಿರುವ ಮುಖ್ಯಮಂತ್ರಿಗಳು ಲಿಂಗಾಯತ ಧರ್ಮ ಸ್ವತಂತ್ರ ಧರ್ಮ ಎಂದು ಘೋಷಿಸಲು ಕೇಂದ್ರಕ್ಕೆ ಶಿಫಾರಸ್ಸು ಮಾಡಬೇಕು ಎಂದರು.

ಮುರುಘಾಮಠದ ಶ್ರೀ ಮಲ್ಲಿಕಾರ್ಜುನ ಸ್ವಾಮಿಗಳು,ಮುಂಡರಗಿ ತೋಂಟದಾರ್ಯ ಶಾಖಾಮಠದ ನಿಜಗುಣಾನಂದಶ್ರೀಗಳು,ಕೂಡಲಸಂಗಮ ಪಂಚಮಸಾಲಿ ಪೀಠದ ಬಸವ ಮೃತ್ಯುಂಜಯ ಶ್ರೀಗಳು ಸಾನಿಧ್ಯವಹಿಸಿ ಮಾತನಾಡಿದರು.

ವಿಧಾನಪರಿಷತ್ ಸದಸ್ಯ ಬಸವರಾಜ ಹೊರಟ್ಟಿ,ಶಾಸಕ ಪ್ರಸಾದ ಅಬ್ಬಯ್ಯ, ಮಾಜಿ ಸಭಾಪತಿ ವೀರಣ್ಣ ಮತ್ತಿಕಟ್ಟಿ,ಜಿಲ್ಲಾಧಿಕಾರಿ ಡಾ.ಎಸ್.ಬಿ.ಬೊಮ್ಮನಹಳ್ಳಿ ಮತ್ತಿತರರು ವೇದಿಕೆಯಲ್ಲಿ ಉಪಸ್ಥಿತರಿದ್ದರು.

---------------